Gang Coolies Working on Daily Wage Basis

393. Sri H. G. CHANNAPPA (Magadi).—

Will the Minister for Public Works and Electricity be pleased to state :—

whether the gang coolies who are working on daily wage basis will be treated as Class IV servants and extended all the facilities available to Class IV Servants by giving up the present system ?

Sri H. M. CHANNABASAPPA (Minister for Public Works and Electricity).—

No.

ಶ್ರೀ ಎಚ್. ಜಿ. ಚೆನ್ನಪ್ಪ.—ಇವರಿಗೂ ಸಹ ನಾಲ್ಕನೇ ವರ್ಗದ ನೌಕರರಿಗೆ ಕೊಡುತ್ತಿರುವ ಸೌಲಭ್ಯಗಳನ್ನು ಜಾಗ್ರತೆ ಕೊಟ್ಟು ಅನುಕೂಲ ಮಾಡಿಕೊಡುತ್ತೀರಾ ? ಈ ರೀತಿ ಮಾಡಿಕೊಡ ಬೇಕೆಂದು ಅವರು ಸರ್ಕಾರಕ್ಕೆ ರೆಪ್ರಸೆಂಟೇಷನ್ ಕೊಟ್ಟಿದ್ದರೂ ಇನ್ನೂ ವರೆಗೆ ಕಾರ್ಯಗತ ಮಾಡದಿರುವುದಕ್ಕೆ ಕಾರಣವೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಜಿ. ಚೆನ್ನಪ್ಪ.—ಇನ್ನು ಮುಂದಾದರೂ ಸಹ ಇವರ ಬೇಡಿಕೆಗಳನ್ನು ಪೂರೈಸಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಕನ್ನಡದಲ್ಲಿ ಹೇಳಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರನ್ನೂ ಸಹ ಮನುಷ್ಯರನ್ನಾಗಿ ಮಾಡಿ ಸ್ವಾಮಿ ?

(ಉತ್ತರವಿಲ್ಲ)

ಶ್ರೀ ಎನ್. ಬಸವಯ್ಯ.—ಈ ಗ್ಯಾಂಗ್ ಕೂಲಿಗಳು ಅಸಿಸ್ಟೆಂಟ್ ಇಂಜಿನಿಯರ್‌ಗಳ ಮನೆಯಲ್ಲಿ ಮತ್ತು ಸೂಪರ್‌ವೈಸರ್ ಮನೆಗಳಲ್ಲಿ ನೀರು ಸೇದುವುದು, ಬಟ್ಟೆ ಒಗೆಯುವುದು, ಸೌದೆ ಒಡೆಯುವುದು ಮುಂತಾದ ಕೆಲಸಗಳನ್ನು ಮಾಡಿಕೊಂಡು ರಸ್ತೆ ಕೆಲಸಗಳನ್ನು ಸಹ ಮಾಡಬೇಕಾಗಿದೆ. ಮನೆ ಕೆಲಸಗಳನ್ನು ಮಾಡದಿದ್ದರೆ ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಅಬ್‌ಸೆಂಟ್ ಎಂದು ಕೋರಿಸಿ ಆ ದಿನದ ಕೂಲಿಯನ್ನು ಕಳೆದುಬಿಡುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ, ಅವರ ಕಷ್ಟವನ್ನು ತಪ್ಪಿಸಲು ಇವರಿಗೂ ನಾಲ್ಕನೆ ದರ್ಜೆಯ ನೌಕರರ ಸೌಲತ್ತುಗಳನ್ನು ಜಾಗ್ರತೆ ಒದಗಿಸಿಕೊಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇವರುಗಳು ಇಂಜಿನಿಯರ್‌ಗಳ ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ, ಬಂದರೆ ಉಗ್ರವಾದ ಕ್ರಮ ಕೈಗೊಳ್ಳುತ್ತೇವೆ. ಆದರೆ ಇವರುಗಳನ್ನು ನಾಲ್ಕನೆಯ ದರ್ಜೆಯ ನೌಕರರುಗಳನ್ನಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಶರಣಪ್ಪ,—ಈಗ ವಿದ್ಯುಚ್ಛಕ್ತಿ ಇರಾಖೆಯಲ್ಲಿ ಡೈಲವೇಜಸ್ ಮೇಲೆ ಕೆಲಸ ಮಾಡುತ್ತಿದ್ದ ಅನೇಕ ಜನರನ್ನು ಲೈನ್‌ಮನ್‌ಗಳೆಂದು ಮಾಡಿದ್ದಾರೆ. ಅದೇ ರೀತಿ ಇಲ್ಲಿಯೂ ಇವರಿಗೆ ನಾಲ್ಕನೆ ದರ್ಜೆಯ ನೌಕರರ ಸವಲತ್ತುಗಳನ್ನು ಏತಕ್ಕೆ ಕೊಡಬಾರದು ? ಆ ರೀತಿ ಪರಿಗಣನೆ ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಜನರು ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಇರುತ್ತಾರೆ. ಆಯಾ ರಸ್ತೆಗಳ ಕೆಲಸಕ್ಕೆ ತಕ್ಕ ಹಾಗೆ ಇವರುಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ರಸ್ತೆ ಕೆಲಸ ಮುಗಿದಂತೆ ಇವರುಗಳ ಸಂಖ್ಯೆಯನ್ನು ಹೆಚ್ಚುಕಡಿಮೆ ಮಾಡಬೇಕಾಗುತ್ತದೆ. ಆಯಾ ಜಿಲ್ಲೆ, ಆಯಾ ರಸ್ತೆ ಮತ್ತು ಕಾಲಪರಿಸ್ಥಿತಿಯನ್ನು ನೋಡಿಕೊಂಡು ಆದಕ್ಕನುಗುಣವಾಗಿ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಇವರ ವಿಚಾರದಲ್ಲಿ ಕೆಲವು ಅಂಕಿಅಂಶಗಳನ್ನು ಕೊಟ್ಟರೆ ಮಾನ್ಯ ಸದಸ್ಯರಿಗೆ ಆಶ್ಚರ್ಯವಾಗಬಹುದು ? ಮೇನಟೆನೆನ್ಸ್ ಎಕ್ಸ್‌ಪೆಂಡೀಚರ್ 6 ಕೋಟಿ 15 ಲ 9 ಸಾವಿರ ರೂಪಾಯಿಗಳು ಇದ್ದರೆ, ಅದರಲ್ಲಿ ಒಂದು ಕೋಟಿ 9 ಲಕ್ಷ ರೂಪಾಯಿಗಳ

ಕೂಲಿಗಾಗಿಯೇ ಖರ್ಚಾಗುತ್ತದೆ. ಕೆಲವು ಭಾಗಗಳಲ್ಲಿ 40 ರಿಂದ 44 ಪರ್ಸೆಂಟ್‌ವರೆಗೆ ಕೂಲಿಗಾಗಿಯೇ ಹಣ ಖರ್ಚಾಗುತ್ತದೆ. 6 ಕೋಟಿ ಚಿಲ್ಲರೆ ರೂಪಾಯಿಗಳಲ್ಲಿ ಒಂದು ಕೋಟಿ 9 ಲಕ್ಷ ರೂಪಾಯಿಗಳವರೆಗೆ ಕೂಲಿಯೇ ಹೋದರೆ ಇನ್ನು ಕೆಲಸ ಯಾವ ರೀತಿ ಮಾಡುವುದು ? ಆದ್ದರಿಂದ ದಿನ ಕ್ರಮೇಣ ರಸ್ತೆಯನ್ನು ಆಸ್ಫಾಲ್ಟ್ ಮಾಡಿದಂತೆ ಮೈಲಿ ಕೂಲಿಗಳ ವೆಚ್ಚವನ್ನು ಕಡಿಮೆ ಮಾಡ ಬೇಕಾಗುತ್ತದೆ. ಆದ್ದರಿಂದ ಅವರನ್ನು ಪರ್ಮನೆಂಟ್ ಮಾಡುವುದಕ್ಕಾಗುವುದಿಲ್ಲ.

1-30 P.M.

ಶ್ರೀ ಹಂಜಿಶಿವಣ್ಣ.—ಆ ನೌಕರರಿಗೆ ದಿನಗೂಲಿ ನಂಬಳ ಎಂದು ಕೊಡುತ್ತೀರೋ ಅಥವಾ ತಿಂಗಳ ನಂಬಳ ಕೊಡುತ್ತೀರೋ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ದಿನಕೂಲಿಯ ಮೇಲೆ ತಿಂಗಳಿಗೆ ಎಷ್ಟಾಗುತ್ತದೆ ಎಂಬುದನ್ನು ಲೆಕ್ಕ ಹಾಕಿ ಅದರಂತೆ ಅವರಿಗೆ ದುಡ್ಡು ಕೊಡುತ್ತೇವೆ.

ಶ್ರೀ ಟಿ. ಎಂ ಮಂಜುನಾಥ್.—ಈ ಇಲಾಖೆಯಲ್ಲಿ ಗ್ಯಾಂಗ್‌ಮೆನ್‌ಗಳ ಅವಶ್ಯಕತೆ ಇದೆ ಯೆಂಬುದು ಗೊತ್ತಿರತಕ್ಕ ವಿಚಾರ. ಅವರು ಇಲ್ಲದೇ ಹೋದರೆ ಯಾವ ಕಾರ್ಯಕ್ರಮಗಳೂ ನಡೆಯುವುದಿಲ್ಲ. ಆದ್ದರಿಂದ ಅವರನ್ನು ಪರ್ಮನೆಂಟಾಗಿ ಇಟ್ಟುಕೊಂಡು ಅವರಿಂದ ಕೆಲಸವನ್ನು ತೆಗೆದು ಕೊಳ್ಳುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರ ಸಂಖ್ಯೆ ಏನಿದೆ ಅದನ್ನು ಅವಶ್ಯಕತೆಯ ಮೇಲೆ ಇಟ್ಟು ಕೊಳ್ಳುತ್ತೇವೆ. ಈಗ ರೋಡ್ ಮೈನ್‌ಟೆನನ್ಸ್‌ಗಾಗಿ 6 ಕೋಟಿ ಚಿಲ್ಲರೆ ರೂಪಾಯಿಗಳನ್ನು ಒದಗಿಸ ಲಾಗುತ್ತಿದೆ. ಅದರಲ್ಲಿ ದಿನಕೂಲಿಯವರಿಗಾಗಿ ಒಂದು ಕೋಟಿ 9 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಅವರನ್ನು ನಾಲ್ಕನೇ ದರ್ಜೆಯ ನೌಕರರಾಗಿ ಪರ್ಮನೆಂಟ್ ಮಾಡಿದರೆ ಇನ್ನೂ ಹೆಚ್ಚು ಹಣ ಖರ್ಚಾಗುತ್ತದೆ. ಆಗ ರಸ್ತೆಯನ್ನು ಮೇಂಟೇನ್ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನವರು ಬೇರೆ ರಾಜ್ಯದಲ್ಲಿ ಕೋರ್ಟಿಗೆ ಹೋಗಿ ಅವರಿಗೆ ಸರ್ಕಾರಿ ನೌಕರರ ಶಾಸನ ಅನ್ವಯವಾಗಬೇಕೇ ಅಥವಾ ಕೈಗಾರಿಕಾ ಶಾಸನ ಅನ್ವಯವಾಗಬೇಕೇ ಎನ್ನುವ ಪ್ರಶ್ನೆ ಬಂದು ಅವರಿಗೆ ಕಾರ್ಮಿಕರ ಶಾಸನ ಅನ್ವಯವಾಗಬೇಕು, ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಅನ್ವಯವಾಗಬೇಕು ಎಂದು ಕೋರ್ಟಿನಲ್ಲಿ ತೀರ್ಮಾನವಾದದ್ದು ತಮಗೆ ಗೊತ್ತಿದೆ. ಆದ್ದರಿಂದ ಅವರಿಗೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ತರುವುದಕ್ಕೆ ಏತಕ್ಕೆ ಅಡ್ಡಿ ಬರುತ್ತಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ತಪ್ಪು ಅಭಿಪ್ರಾಯ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಯಾವ ಯಾವ ಕಾಲದಲ್ಲಿ ಏನೇನು ಕೆಲಸ ಮಾಡಬೇಕಾಗುತ್ತದೆ ಆಯಾ ಕೆಲಸಕ್ಕೆ ತಕ್ಕಂತೆ ದಿನ ಕೂಲಿಗಳನ್ನು ನೇಮಕ ಮಾಡಿಕೊಳ್ಳುತ್ತೇವೆ. ಅದ್ದರಿಂದ ಇಲ್ಲಿ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಬರತಕ್ಕದ್ದು ಇಲ್ಲ.

Sri M. S. KRISHNAN.—What about the decision of the court?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಎಲ್ಲೆಲ್ಲಿ ಹಂಗಾಮಿಯಾಗಿ ನೇಮಕ ಮಾಡಿಕೊಳ್ಳುತ್ತಾರೆ ಅವರಿಗೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಅನ್ವಯ ಮಾಡಬೇಕು ಎಂದು ಕೋರ್ಟಿನಲ್ಲಿ ತೀರ್ಮಾನವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಜಿ. ಚನ್ನಬಸಪ್ಪ.—ಆ ಗ್ಯಾಂಗ್ ಕೂಲಿಗಳು 15-20 ವರ್ಷಗಳಿಂದ ಆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ನಿಯಮಾವಳಿಯ ಪ್ರಕಾರ 5 ವರ್ಷ ಕೆಲಸ ಮಾಡಿರತಕ್ಕವರನ್ನು ಖಾಯಂ ಮಾಡಬೇಕು ಎಂದು ಇದೆ. ಆದ್ದರಿಂದ ಈಗಾಗಲೇ 15 ವರ್ಷ 10 ವರ್ಷ ಸರ್ವಿಸ್ ಆಗಿರುವವರನ್ನು ಖಾಯಂ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎಚ್. ಜಿ. ಚನ್ನಪ್ಪ.—ಈ ಗ್ಯಾಂಗ್ ಕೂಲಿಗಳಿಗೆ ಒಂದೊಂದು ಕಡೆ ಒಂದೊಂದು ರೀತಿಯ ಕೂಲಿಯನ್ನು ಕೊಡುತ್ತಿದ್ದಾರೆ. ಆದ್ದರಿಂದ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯ ಕೂಲಿಯನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾದ ಕೂಲಿಯನ್ನು ಕೊಡುವುದಕ್ಕಾಗುವುದಿಲ್ಲ. ಆಯಾ ಸ್ಥಳದ ಸನ್ನಿವೇಶ, ಅಲ್ಲಿರತಕ್ಕ ಕಷ್ಟಗಳು ಇವುಗಳನ್ನೆಲ್ಲಾ ಪರಿಶೀಲನೆ ಮಾಡಿ ಕೂಲಿಯನ್ನು ಹೆಚ್ಚು ಕಡಿಮೆ ಕೊಡಬೇಕಾಗುತ್ತದೆ. ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯ ಕೂಲಿಯನ್ನು ಕೊಡುವುದಕ್ಕಾಗುವುದಿಲ್ಲ.

Manjari-Ingli Lift Irrigation Scheme

412. **Sri P. P. HEGRE** (Chikodi). —

Will the Minister for Public Works and Electricity be pleased to state.—

(*a*) the estimated cost of the Manjri-Ingli Lift Irrigation scheme on Krishna River in Chikodi Taluk and whether the scheme has been sanctio: ed ;

(*b*) if so, when it will be completed ;

(*c*) the number of acres of land that would be Irrigated under this scheme ?

Sri H. M. CHANNABASAPPA (Minister for Public Works and Electricity).—

(*a*) The estimated cost is Rs. 16.93 lakhs. The estimate is not sanctioned.

(*b*) Does not arise in view of reply to c ause (*a*).

(*c*) 2,688 Acres.

ಶ್ರೀ ಪಿ. ಪಿ. ಹೆಗರೆ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಮಂಜರಿ-ಇಂಗಲಿಯಾತ ನೀರಾವರಿ ಯೋಜನೆಯನ್ನು ಮಂಜೂರು ಮಾಡಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ ಆ ರೀತಿ ಆ ಯೋಜನೆಗಳನ್ನು ಮಂಜೂರು ಮಾಡದೇ ಇರುವುದಕ್ಕೆ ಕಾರಣವೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ನಾನಾ ಕಾರಣಗಳು ಇರುತ್ತವೆ. ಆ ಯೋಜನೆ ಮಂಜೂರು ಆಗಬೇಕಾದರೆ ಟೆಕ್ನಿಕಲ್, ಫೈನಾನ್ಷಿಯಲ್ ಫೀಜಿಬಲ್ ಆಗಿರಬೇಕು, ಹಣದ ಅಭಾವ ಇರಬಾರದು. ಆ ರೀತಿಯಾಗಿ ಯೋಜನೆ ಫೀಜಿಬಲ್ ಆಗಿದ್ದರೆ ಅದನ್ನು ಮಂಜೂರು ಮಾಡುತ್ತೇವೆ. ಯಾವುದೋ ಒಂದು ಕಾರಣದಿಂದ ಅದನ್ನು ನಿಲ್ಲಿಸಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪಿ. ಪಿ. ಹೆಗರೆ.—ಇದು 6 ವರ್ಷಗಳಿಂದ ಹಾಗೆಯೇ ಇದೆ. ಈಗ ಬರಗಾಲ ಕಾಮು ಗಾರಿಗಳನ್ನು ಕೈಗೊಳ್ಳುವಾಗಲಾದರೂ ಇದನ್ನು ಕಾರ್ಯಗತ ಮಾಡುವಂತಹ ಪ್ರಸಂಗವಿದ್ದರೂ ಇದನ್ನು ಮಂಜೂರು ಮಾಡದೇ ಇರುವುದಕ್ಕೆ ಕಾರಣವೇನು ? ಇದು ಹಾಗೆಯೇ ಉಳಿಯಬೇಕಾದರೆ ಯಾವ ತೊಂದರೆ ಇದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಸ್ಪಷ್ಟವಾಗಿ ಹೇಳುತ್ತೇನೆ, ಆದು ಟಿಕ್ನಿಕಲ್ ಫೀಜಿಬಲ್ ಆಗಿರಬೇಕು, ಫೈನಾನ್ಷಿಯಲ್ ಫೀಜಿಬಲ್ ಆಗಿರಬೇಕು ಮತ್ತು ಹಣದ ಅವಕಾಶ ಇರಬೇಕು. ಈ ಮೂರು ಇದ್ದರೆ ತಕ್ಷಣ ಮಂಜೂರು ಮಾಡುತ್ತೇವೆ.